# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಮುಕ್ತಗಂಗೋತ್ರಿ, ಮೈಸೂರು – ೫೭೦ ೦೦೬

'ವಿಶ್ವವಿದ್ಯಾನಿಲಯದ 25ನೇ ವರ್ಷದ ಬೆಳ್ಳಿ ಹಬ್ಬದ ವರ್ಷಾಚರಣೆ' ಜೂನ್ – 2021 ರಿಂದ ಜೂನ್ – 2022 ರವರೆಗೆ

'ಕನ್ನಡ ಕಾಯಕ ವರ್ಷಾಚರಣೆ' ೧ನೇ ನವೆಂಬರ್ ೨೦೨೦ ರಿಂದ ೩೧ನೇ ಅಕ್ಟೋಬರ್ ೨೦೨೧ ರವರೆಗೆ

**ದಿನಾಂಕ: 12–08–2021** ರಂದು ಸಂಜೆ **6:00** ಗಂಟೆಗೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಕುಲಪತಿಗಳ ಕಚೇರಿ ಸಭಾಂಗಣದಲ್ಲಿ ನಡೆದ 18ನೇ ವಿಶೇಷ ಶೈಕ್ಷಣಿಕ ಮಂಡಳಿ ಸಭೆಯ ನಡಾವಳಿ.

| ಉಪಸ್ಥಿತರು | |
|---|---|
| **ಪ್ರೊ. ಎಸ್. ವಿದ್ಯಾಶಂಕರ್**<br>ಮಾನ್ಯ ಕುಲಪತಿಗಳು ಹಾಗು ಅಧ್ಯಕ್ಷರು<br>ಶೈಕ್ಷಣಿಕ ಮಂಡಳಿ,<br>ಕರಾಮುವಿ, ಮೈಸೂರು. | **ಪ್ರೊ. ರಾಜಣ್ಣ .ಆರ್.**<br>ಕುಲಸಚಿವರು ಮತ್ತು ಸದಸ್ಯ ಕಾರ್ಯದರ್ಶಿಗಳು<br>ಶೈಕ್ಷಣಿಕ ಮಂಡಳಿ,<br>ಕರಾಮುವಿ, ಮೈಸೂರು. |
| **ಪ್ರೊ. ಕಾಂಬ್ಳೆ ಅಶೋಕ್**<br>ಡೀನ್ (ಶೈಕ್ಷಣಿಕ)<br>ಸದಸ್ಯರು ಶೈಕ್ಷಣಿಕ ಮಂಡಳಿ,<br>ಕರಾಮುವಿ, ಮೈಸೂರು. | **ಡಾ. ಎ. ಖಾದರ್ ಪಾಷಾ**<br>ಹಣಕಾಸು ಅಧಿಕಾರಿಗಳು ಹಾಗು ಸದಸ್ಯರು<br>ಶೈಕ್ಷಣಿಕ ಮಂಡಳಿ,<br>ಕರಾಮುವಿ, ಮೈಸೂರು. |
| **ಡಾ. ಮಹಾದೇವನ್ .ಕೆ.ಎಂ.**<br>ಕುಲಸಚಿವ (ಪರೀಕ್ಷಾಂಗ) ಹಾಗು ಸದಸ್ಯರು<br>ಶೈಕ್ಷಣಿಕ ಮಂಡಳಿ,<br>ಕರಾಮುವಿ, ಮೈಸೂರು. | **ಡಾ. ಷಣ್ಮುಖ**<br>ಡೀನ್ (ಅಧ್ಯಯನ ಕೇಂದ್ರಗಳು),<br>ಸದಸ್ಯರು ಶೈಕ್ಷಣಿಕ ಮಂಡಳಿ,<br>ಕರಾಮುವಿ, ಮೈಸೂರು. |
| **ಡಾ. ಲಕ್ಷ್ಮಿ .ಎನ್.**<br>ಮುಖ್ಯಸ್ಥರು, ಶಿಕ್ಷಣಶಾಸ್ತ್ರ ಅಧ್ಯಯನ ಹಾಗು ಸಂಶೋಧನಾ ವಿಭಾಗ<br>ಸದಸ್ಯರು ಶೈಕ್ಷಣಿಕ ಮಂಡಳಿ,<br>ಕರಾಮುವಿ, ಮೈಸೂರು. | |
| **ವಿಶೇಷ ಆಹ್ವಾನಿತರು** | |
| **ಡಾ. ನಿರಂಜನ್ ರಾಜ್**<br>**CIQA ನಿರ್ದೇಶಕರು**<br>ಕರಾಮುವಿ, ಮೈಸೂರು. | **ಡಾ. ಹೆಚ್. ರಾಜೇಶ್ವರಿ**<br>**ವಿಶೇಷಾಧಿಕಾರಿ – ಡೀನ್ (ಶೈಕ್ಷಣಿಕ)**<br>ಕರಾಮುವಿ, ಮೈಸೂರು. |

ಸಭೆಗೆ ಹಾಜರಾಗಿದ್ದ ಸದಸ್ಯರುಗಳನ್ನು ಮಾನ್ಯ ಕುಲಪತಿಗಳು ಸ್ವಾಗತಿಸುವುದರೊಂದಿಗೆ ಸಭೆಯು ಪ್ರಾರಂಭವಾಯಿತು. ಮುಂದುವರೆದು ಮಾನ್ಯ ಕುಲಪತಿಗಳು ಮಾತನಾಡುತ್ತಾ, 18ನೇ ವಿಶೇಷ ಶೈಕ್ಷಣಿಕ ಮಂಡಳಿ ಸಭೆಯ ಕಾರ್ಯಸೂಚಿಯನ್ನು ಸಭೆಯಲ್ಲಿ ಮಂಡಿಸಲು ಡೀನ್ (ಶೈಕ್ಷಣಿಕ) ಅವರಿಗೆ ಸೂಚಿಸಿದರು.

**ಕುಲಸಚಿವರು** | **ಕುಲಪತಿಗಳು**

## ವಿಷಯ ಸಂಖ್ಯೆ: 18.01

**ವಿಷಯ : Certificate Programme ಗಳ ಅಧ್ಯಾದೇಶವನ್ನು ಹೊಸದಾಗಿ ರಚಿಸಿರುವ ಬಗ್ಗೆ.**

****

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ Certificate Coures ಗಳ ಸಂಬಂಧ ಅಧ್ಯಾದೇಶವನ್ನು ಸಿದ್ಧಪಡಿಸಿ ಸರ್ಕಾರದ ಮುಖಾಂತರ ಕುಲಾಧಿಪತಿಗಳ ಅಂಕಿತಕ್ಕಾಗಿ PG Diploma, Diploma Courses ಗಳ ಅಧ್ಯಾದೇಶದ ಜೊತೆಗೆ ಕಳುಹಿಸಿಕೊಡಲಾಗಿತ್ತು. ಆದರೆ PG Diploma, Diploma Courses ಗಳ ಅಧ್ಯಾದೇಶಗಳು ಕುಲಾಧಿಪತಿಗಳಿಂದ ಅಂಕಿತಗೊಂಡು ಬಂದಿರುತ್ತದೆ. Certificate Courses ಅಧ್ಯಾದೇಶ ಅನುಮೋದನೆ ಗೊಂಡಿರುವುದಿಲ್ಲ.

ಸದರಿ Certificate Courses ಅಧ್ಯಾದೇಶದ ಅನುಮೋದನೆ/ ಕುಲಾಧಿಪತಿಗಳ ಅಂಕಿತಕ್ಕಾಗಿ ವಿವಿಯು ಸರ್ಕಾರಕ್ಕೆ ಪತ್ರ ಸಂಖ್ಯೆ ಕರಾಮುವಿ/ ಡೀನ್(ಶೈ)/2018–19 ದಿನಾಂಕ: 11–01–2019, ಪತ್ರ ಸಂಖ್ಯೆ ಕರಾಮುವಿ/ಡೀನ್(ಶೈ)/ ಡಿಎಸಿ–07/ 2019–20 ದಿನಾಂಕ: 06–06–2020, ಮತ್ತು ಪತ್ರ ಸಂಖ್ಯೆ ಕರಾಮುವಿ/ಡೀನ್(ಶೈ)–07/2020–21, ದಿನಾಂಕ: 20–11–2020 ಗಳಲ್ಲಿ ಪತ್ರ ವ್ಯವಹರಿಸಿದ್ದರೂ ಸಹಾ ಅಂಕಿತಗೊಳ್ಳದೆ ವಾಪಸ್ಸಾಗಿರುತ್ತದೆ. ಪ್ರಸ್ತುತ ಅಧ್ಯಾದೇಶದಲ್ಲಿ ವಿವಿಯ ನಿಯಮಗಳು ಹಾಗು ದಿನಾಂಕ: 19–07–2021 ರಂದು ಡೀನ್ (ಶೈ) ಅಧ್ಯಕ್ಷತೆಯಲ್ಲಿ ನಡೆದ ವಿವಿಧ ಅಧ್ಯಯನ ವಿಭಾಗಗಳ ಮುಖ್ಯಸ್ಥರುಗಳ ಸಭೆಯಲ್ಲಿ ಕೈಗೊಂಡ ಶಿಫಾರಸ್ಸನ್ನು ಅಳವಡಿಸಿ ಕೆಲವು ಮಾರ್ಪಾಡುಗಳೊಂದಿಗೆ ಹೊಸದಾಗಿ Certificate ಶಿಕ್ಷಣಕ್ರಮಗಳ ಅಧ್ಯಾದೇಶದ ಕರಡನ್ನು ಸಿದ್ಧಪಡಿಸಲಾಗಿದೆ. ಸದರಿ ಅಧ್ಯಾದೇಶವನ್ನು ಸರ್ಕಾರದ ಮುಖಾಂತರ ಕುಲಾಧಿಪತಿಗಳ ಅಂಕಿತಕ್ಕಾಗಿ ಕಳುಹಿಸಿಕೊಡಬೇಕಾಗಿರುವ ಹಿನ್ನೆಲೆಯಲ್ಲಿ. ಪ್ರಸ್ತುತ, ಹೊಸದಾಗಿ ಸಿದ್ಧಪಡಿಸಿರುವ Certificate Programme Ordinance – 2021 ರ ಕರಡನ್ನು ಶೈಕ್ಷಣಿಕ ಮಂಡಳಿಯ ಸಭೆಯ ಚರ್ಚೆ ಹಾಗೂ ನಿರ್ಣಯಕ್ಕಾಗಿ ಮಂಡಿಸಿದೆ.

**ಚರ್ಚೆ :**

**Certificate Programme ಗಳು ಯುಜಿಸಿ ನಿಯಮಾವಳಿಗಳ ವ್ಯಾಪ್ತಿಗೆ ಬರುವುದಿಲ್ಲವೆನ್ನುವದನ್ನು ಗಮನಿಸಲಾಯಿತು. Certificate Programme ಅಧ್ಯಾದೇಶದ ಬಗ್ಗೆ ಸರ್ಕಾರದಿಂದ ಸ್ಪಷ್ಟೀಕರಣ ಕೋರಿ ಹಾಗೂ ಅದಕ್ಕೆ ಕರಾಮುವಿಯಿಂದ ನೀಡಿದ್ದ ಉತ್ತರಗಳನ್ನು ಗಮನಿಸಲಾಯಿತು.**

**ತೀರ್ಮಾನ :**

**ಸದರಿ Certificate Programme ಅಧ್ಯಾದೇಶವನ್ನು ಸರ್ಕಾರದ ಮುಖಾಂತರ ಕುಲಾಧಿಪತಿಗಳ ಅಂಕಿತಕ್ಕಾಗಿ ಕಳುಹಿಸಿಕೊಡಲು ಶಿಫಾರಸ್ಸು ಮಾಡಲಾಯಿತು.**

**ಕುಲಸಚಿವರು** **ಕುಲಪತಿಗಳು**

## ವಿಷಯ ಸಂಖ್ಯೆ: 18.02

ವಿಷಯ : ಸಹಭಾಗಿತ್ವ ಸಂಸ್ಥೆಗಳ ತಾಂತ್ರಿಕ ಮತ್ತು ತಾಂತ್ರಿಕೇತರ ಶಿಕ್ಷಣಕ್ರಮಗಳನ್ನು ವಿಂಗಡಿಸಿ ಅಧಿಸೂಚನೆಗೊಳಿಸಿರುವ ಬಗ್ಗೆ.

ಉಲ್ಲೇಖ : 1. ಪರೀಕ್ಷಾ ವಿಭಾಗದ ಟಿಪ್ಪಣಿ ಸಂಖ್ಯೆ : ಕರಾಮುವಿ/ಪವಿ/ಸಭಾಸಂ/2020–21, ದಿನಾಂಕ : 26–02–2021.

2. ಕಚೇರಿ ಆದೇಶ ಸಂಖ್ಯೆ : ಕರಾಮುವಿ/ಡೀನ್(ಶೈ)–04/2021–22, ದಿನಾಂಕ : 19–06–2021.

3. ದಿನಾಂಕ : 20–07–2021 ಮತ್ತು ದಿನಾಂಕ : 28–07–2021 ರಂದು ನಡೆದ ಸಭೆಗಳ ನಡಾವಳಿಗಳು ಹಾಗು ಶಿಫಾರಸ್ಸು.

4. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 12–08–2021.

5. ಸಂಖ್ಯೆ : ಕರಾಮುವಿ/ಡೀನ್(ಶೈ)–04/2021–22 ರ ಅಧಿಸೂಚನೆಯ ದಿನಾಂಕ : 12–08–2021

*****

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು, ಈ ಹಿಂದೆ, ರಾಜ್ಯದ ಮತ್ತು ಹೊರ ರಾಜ್ಯದ ವಿವಿಧ ಸಹಭಾಗಿತ್ವ ಸಂಸ್ಥೆಗಳೊಂದಿಗೆ ಒಡಂಬಡಿಕೆ ಮಾಡಿಕೊಂಡು ತಾಂತ್ರಿಕ ಮತ್ತು ತಾಂತ್ರಿಕೇತರ ಶಿಕ್ಷಣಕ್ರಮಗಳ ಪರೀಕ್ಷೆಗಳನ್ನು ನಡೆಸಿದ್ದು, ತಾಂತ್ರಿಕ ಮತ್ತು ತಾಂತ್ರಿಕೇತರ ಶಿಕ್ಷಣಕ್ರಮಗಳಿಗೆ ಸಂಬಂಧಿಸಿದಂತೆ Marks cards/ Transfer/ Provisional/ Genuine/ Convocation Certificates ಗಳನ್ನು ವಿತರಣೆ ಮಾಡುವ ಸಂಬಂಧ ಸ್ಪಷ್ಟತೆ ಇಲ್ಲವೆಂದು ಈ ಬಗ್ಗೆ ಸ್ಪಷ್ಟನೆಯನ್ನು ನೀಡುವಂತೆ ಪರೀಕ್ಷಾಂಗ ವಿಭಾಗವು ಉಲ್ಲೇಖ (1) ರಂತೆ ಕೋರಿರುತ್ತದೆ. ಸದರಿ ವಿಷಯದ ಬಗ್ಗೆ ಶಿಕ್ಷಣಕ್ರಮಗಳನ್ನು ವಿಂಗಡಿಸುವ ಸಂಬಂಧ ಉಲ್ಲೇಖ (2) ರಂತೆ ಸಮಿತಿಯನ್ನು ರಚಿಸಿ ಆದೇಶ ಹೊರಡಿಸಲಾಗಿರುತ್ತದೆ. ಸದರಿ ಸಮಿತಿಯು ಉಲ್ಲೇಖ (3) ರಂತೆ ಸಭೆಗಳನ್ನು ನಡೆಸಿ Annexure - 1, 2 & 3 ರಂತೆ Non-Technical Programmes, Diploma/ Post Graduate Diploma Programmes & Technical Programmes ರಂತೆ ವಿಂಗಡಿಸಿ ಸಮಿತಿಯು ವರದಿಯನ್ನು ಸಲ್ಲಿಸಿರುತ್ತದೆ. ಸದರಿ ಶಿಫಾರಸ್ಸನ್ನು ಅಧಿಸೂಚನೆಗೊಳಿಸಲು ಶೈಕ್ಷಣಿಕ ಮಂಡಳಿ ಮತ್ತು ವ್ಯವಸ್ಥಾಪನಾ ಮಂಡಳಿಯ ಅನುಮೋದನೆಯನ್ನು ಕಾಯ್ದಿರಿಸಿ, ಮಾನ್ಯ ಕುಲಪತಿಗಳು ಉಲ್ಲೇಖ (4)ರ ಅನುಮೋದನೆಯಂತೆ ಉಲ್ಲೇಖ (5)ರಲ್ಲಿ ಅಧಿಸೂಚನೆ ಹೊರಡಿಸಲಾಗಿದೆ.

ಈ ಹಿನ್ನೆಲೆಯಲ್ಲಿ ಸದರಿ ವಿಷಯದ ಬಗ್ಗೆ ಅನುಸಮರ್ಥನೆ ಪಡೆಯಲು ಶೈಕ್ಷಣಿಕ ಮಂಡಳಿಯ ಮುಂದೆ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ.

<u>ಚರ್ಚೆ</u> :

**ತಾಂತ್ರಿಕ ಮತ್ತು ತಾಂತ್ರಿಕೇತರ ಶಿಕ್ಷಣಕ್ರಮಗಳಿಗೆ ಸಂಬಂಧಿಸಿದಂತೆ ಯುಜಿಸಿಯ ನಿಯಮಗಳನ್ನು ಪರಿಶೀಲಿಸಲಾಯಿತು. ತಾಂತ್ರಿಕ ಶಿಕ್ಷಣಕ್ರಮಗಳಿಗೆ ಸಂಬಂಧಿಸಿದಂತೆ ವಿವಿಯು ಯಾವುದೇ Marks cards/ Transfer/ Provisional/ Genuine/ Convocation Certificates ಗಳನ್ನು ವಿತರಣೆ ಮಾಡಿಲ್ಲದಿರುವುದನ್ನು ಸಭೆ ಗಮನಿಸಿತು.**

<u>ತೀರ್ಮಾನ</u> :

**ರಾಜ್ಯದ ಮತ್ತು ಹೊರ ರಾಜ್ಯದ ವಿವಿಧ ಸಹಭಾಗಿತ್ವ ಸಂಸ್ಥೆಗಳೊಂದಿಗೆ ಒಡಂಬಡಿಕೆ ಮಾಡಿಕೊಂಡು ನಡೆಸಿದ್ದ ಶಿಕ್ಷಣಕ್ರಮಗಳನ್ನು Non-Technical Programmes, Diploma/ Post Graduate Diploma Programmes & Technical Programmes ರಂತೆ ವಿಂಗಡಿಸಿ ಸಲ್ಲಿಸಿರುವ ಸಮಿತಿಯ ವರದಿಯನ್ನು ಅನುಸಮರ್ಥನೆಗೊಳಿಸಲಾಯಿತು.**

ಕುಲಸಚಿವರು

ಕುಲಪತಿಗಳು

## ವಿಷಯ ಸಂಖ್ಯೆ: 18.03

ವಿಷಯ : ಕನ್ನಡವನ್ನು ಕಡ್ಡಾಯವಾಗಿ ಉನ್ನತ ಶಿಕ್ಷಣದಲ್ಲಿ ಒಂದು ಭಾಷೆಯಾಗಿ ಕಲಿಸುವ ಬಗ್ಗೆ.

****

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಶ್ರೀ. ಟಿ.ಎಸ್. ನಾಗಾಭರಣರವರು ವಿಶ್ವವಿದ್ಯಾನಿಲಯಕ್ಕೆ ಬರೆದಿರುವ ಪತ್ರದಲ್ಲಿ ಕನ್ನಡವನ್ನು ಕಡ್ಡಾಯವಾಗಿ ಉನ್ನತ ಶಿಕ್ಷಣದಲ್ಲಿ ಒಂದು ಭಾಷೆಯಾಗಿ ಕಲಿಸುವ ಬಗ್ಗೆ ಕ್ರಮವಹಿಸಲು ತಿಳಿಸಿರುವುದರಿಂದ, ವಿಶ್ವವಿದ್ಯಾನಿಲಯದಲ್ಲಿನ ಭಾಷಿಕ ವಿಷಯಗಳ ಮುಖ್ಯಸ್ಥರು/ ಅಧ್ಯಾಪಕರನ್ನೊಳಗೊಂಡ ಒಂದು ಸಮಿತಿಯನ್ನು ರಚಿಸಲಾಗಿದ್ದು, ಸಮಿತಿಯು ದಿನಾಂಕ: 20–03–2021 ರಂದು ಸಭೆ ನಡೆಸಿ ಡೀನ್ (ಶೈಕ್ಷಣಿಕ) ರವರಿಗೆ ವರದಿಯನ್ನು ನೀಡಿರುತ್ತಾರೆ. ಸದರಿ ವಿಷಯವನ್ನು ಮುಂಬರುವ ವಿಶೇಷ ಶೈಕ್ಷಣಿಕ ಮಂಡಳಿ ಸಭೆಯಲ್ಲಿ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ.

ಚರ್ಚೆ:

ಪ್ರಸ್ತುತ ವಿವಿಯಲ್ಲಿ ತೆಲುಗು, ಹಿಂದಿ ಹಾಗೂ ಸಂಸ್ಕೃತ ವಿಭಾಗಗಳಿದ್ದು ಪದವಿ ಶಿಕ್ಷಣದಲ್ಲಿ ಕನ್ನಡವನ್ನು ಭಾಷಿಕ ವಿಷಯವಾಗಿ ಕಡ್ಡಾಯಗೊಳಿಸಿದಲ್ಲಿ, ವಿದ್ಯಾರ್ಥಿಗಳು ಇಂಗ್ಲಿಷ್ ಭಾಷೆಯನ್ನು ಇನ್ನೊಂದು ಭಾಷಿಕ ವಿಷಯವಾಗಿ ತೆಗೆದುಕೊಳ್ಳುವ ಸಾಧ್ಯತೆ ಇದ್ದು ಮೇಲ್ಕಂಡ ಭಾಷೆಗಳನ್ನು ವಿದ್ಯಾರ್ಥಿಯು ಆಯ್ಕೆ ಮಾಡಿಕೊಳ್ಳಲು ಅವಕಾಶವಿಲ್ಲದಂತಾಗುತ್ತದೆ.

ವಿದ್ಯಾರ್ಥಿಗಳಿಗೆ ಕನ್ನಡ ಹೊರತಾಗಿ ಬೇರೆ ಎರಡು ವಿಷಯಗಳನ್ನು ಭಾಷಿಕ ವಿಷಯಗಳಾಗಿ ಅಭ್ಯಾಸ ಮಾಡಲು ಅವಕಾಶ ನೀಡಿ ಕನ್ನಡದ ಬಗ್ಗೆ ಒಂದು ವಿಷಯವನ್ನು ಪಠ್ಯಕ್ರಮದಲ್ಲಿ ಸೇರಿಸಬಹುದು. ಅದರಲ್ಲಿ ಕನ್ನಡ ಕಲಿತವರಿಗೆ ಹಾಗೂ ಕನ್ನಡ ಕಲಿಯದವರಿಗೆ ಬೇರೆ ಬೇರೆ ಪಠ್ಯಕ್ರಮವಿಡಬೇಕಾಗುತ್ತದೆ.

ತೀರ್ಮಾನ :

ಈ ಬಗ್ಗೆ ಹೆಚ್ಚಿನ ಮಾಹಿತಿ ಪಡೆದು ಮುಂದಿನ ಶೈಕ್ಷಣಿಕ ಮಂಡಳಿಯಲ್ಲಿ ಮಂಡಿಸಲು ಸಭೆ ತೀರ್ಮಾನಿಸಿತು.

ಕುಲಸಚಿವರು

ಕುಲಪತಿಗಳು

## ವಿಷಯ ಸಂಖ್ಯೆ: 18.04

ವಿಷಯ : ಪರಿಣಿತ ಕಾಲೇಜುಗಳು, ಸಂಸ್ಥೆಗಳು, ಅಂತರ ವಿಶ್ವವಿದ್ಯಾನಿಲಯಗಳ ಶೈಕ್ಷಣಿಕ ಸಹಕಾರದೊಂದಿಗೆ ಕರಾಮುವಿಯಲ್ಲಿ ಪ್ರಚಲಿತಕ್ಕೆ ಅವಶ್ಯಕವಿರುವ ಸರ್ಟಿಫಿಕೇಟ್/ ಡಿಪ್ಲೊಮಾ ಕಾರ್ಯಕ್ರಮಗಳನ್ನು ಪ್ರಾರಂಭಿಸುವ ಬಗೆಗೆ.

ಉಲ್ಲೇಖ : 1) ಕಚೇರಿ ಆದೇಶ ಸಂಖ್ಯೆ: ಕರಾಮುವಿ/ಡೀನ್(ಶೈ)-03/2021-22, ದಿನಾಂಕ: 09-07-2021

2) ದಿನಾಂಕ : 28-07-2021 ರಂದು ನಡೆದ ಸಭೆಯ ನಡಾವಳಿ ಹಾಗು ಶಿಫಾರಸ್ಸು.

******

ಪರಿಣಿತ ಕಾಲೇಜುಗಳು, ಸಂಸ್ಥೆಗಳು, ಅಂತರ ವಿಶ್ವವಿದ್ಯಾನಿಲಯಗಳ ಶೈಕ್ಷಣಿಕ ಸಹಕಾರದೊಂದಿಗೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಪ್ರಚಲಿತಕ್ಕೆ ಅವಶ್ಯಕವಿರುವ ಸರ್ಟಿಫಿಕೇಟ್/ ಡಿಪ್ಲೊಮಾ ಕಾರ್ಯಕ್ರಮಗಳನ್ನು ಪ್ರಾರಂಭಿಸುವ ಸಂಬಂಧ ಉಲ್ಲೇಖ (1) ರಂತೆ ಸಮಿತಿಯನ್ನು ರಚಿಸಿ ಕಚೇರಿ ಆದೇಶ ಹೊರಡಿಸಲಾಗಿರುತ್ತದೆ. ಸದರಿ ಸಮಿತಿಯು ಉಲ್ಲೇಖ (2) ರಂತೆ ಸಭೆ ನಡೆಸಿ, ಸಭೆಯ ನಡಾವಳಿ, ಶಿಫಾರಸ್ಸನ್ನೊಳಗೊಂಡ ವರದಿಯನ್ನು Annexure 1, 2 & 3 ಜೊತೆ ಸಲ್ಲಿಸಿರುತ್ತದೆ.

ಸದರಿ ಸಮಿತಿಯು ಸಭೆ ನಡೆಸಿ ಸಲ್ಲಿಸಲಾಗಿರುವ ಸಭೆಯ ನಡಾವಳಿ ಹಾಗು Annexure 1, 2 & 3 ಗಳ ಬಗ್ಗೆ ಶೈಕ್ಷಣಿಕ ಮಂಡಳಿ ಸಭೆಯ ಚರ್ಚೆ ಮತ್ತು ನಿರ್ಣಯಕ್ಕಾಗಿ ವಿಷಯ ಮಂಡಿಸಿದೆ.

ತೀರ್ಮಾನ :

ಸದರಿ ಸಮಿತಿಯ ಶಿಫಾರಸ್ಸನ್ನು ಒಪ್ಪಲಾಯಿತು. ಶಿಫಾರಸ್ಸಿನ ಅಡಕದಂತೆ ಒಪ್ಪಂದದ ಪತ್ರ, ಸದರಿ ಸಂಸ್ಥೆಗಳಿಗೆ ಅರ್ಜಿ ನಮೂನೆ ಹಾಗೂ ಸರ್ಟಿಫಿಕೇಟ್/ ಡಿಪ್ಲೊಮಾ ಕಾರ್ಯಕ್ರಮಗಳನ್ನು ಪ್ರಾರಂಭಿಸುವ ಸಂಬಂಧದ ಮಾರ್ಗಸೂಚಿಗಳನ್ನು ಅನುಮೋದಿಸಲಾಯಿತು.

ಕುಲಸಚಿವರು

ಕುಲಪತಿಗಳು

**ವಿಷಯ ಸಂಖ್ಯೆ: 18.05**

**ವಿಷಯ: ಕರಾಮುವಿಯ 2021–22ನೇ ಶೈಕ್ಷಣಿಕ ಸಾಲಿನಲ್ಲಿ ಪಿಹೆಚ್.ಡಿ ಕಾರ್ಯಕ್ರಮಗಳಿಗೆ (ರೆಗ್ಯುಲರ್ ಮೋಡ್) ಪ್ರವೇಶಾತಿಗೆ ಅಧಿಸೂಚನೆ ಹೊರಡಿಸಬೇಕಾಗಿದ್ದು, ಕರಾಮುವಿ ಪಿಹೆಚ್.ಡಿ ಆಧ್ಯಾದೇಶ 2012 (3ನೇ ತಿದ್ದುಪಡಿ ಆಧ್ಯಾದೇಶ 2021) ಅನ್ನು ಅನುಮೋದಿಸುವ ಬಗ್ಗೆ.**

******

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ 2021–22ನೇ ಶೈಕ್ಷಣಿಕ ಸಾಲಿನಲ್ಲಿ ಪಿಹೆಚ್.ಡಿ ಕಾರ್ಯಕ್ರಮಗಳಿಗೆ (ರೆಗ್ಯುಲರ್ ಮೋಡ್) ಪ್ರವೇಶಾತಿಗೆ ಸಂಬಂಧಪಟ್ಟಂತೆ ಜಾಹೀರಾತು ನೀಡಲು ಕರಾಮುವಿ ಪಿಹೆಚ್.ಡಿ ಆಧ್ಯಾದೇಶ 2012 (2ನೇ ತಿದ್ದುಪಡಿ ಆಧ್ಯಾದೇಶ 2019)ರಲ್ಲಿ ಕೆಲವು ತಿದ್ದುಪಡಿಗಳನ್ನು ಮಾಡಲು ರಚಿತಗೊಂಡಿರುವ ಕರಾಮುವಿ ಆಧ್ಯಾದೇಶ ತಿದ್ದುಪಡಿ ಸಮಿತಿ ಸಭೆಯನ್ನು ದಿನಾಂಕ: 28–07–2021ರಂದು ಡೀನ್(ಶೈಕ್ಷಣಿಕ) ರವರ ಅಧ್ಯಕ್ಷತೆಯಲ್ಲಿ ಕೈಗೊಂಡ ತೀರ್ಮಾನಗಳನ್ನು ಈಗಾಗಲೇ ಆಧ್ಯಾದೇಶದಲ್ಲಿ ತಿದ್ದುಪಡಿ ಮಾಡಲಾಗಿರುತ್ತದೆ. (ದಿನಾಂಕ: 28–07–2021 ರಂದು ಸದರಿ ಸಮಿತಿಯ ನಡಾವಳಿಯನ್ನು ಇದರೊಂದಿಗೆ ಅಡಕಗೊಳಿಸಲಾಗಿದೆ.) (ಬಾವುಟ–ಅ)

ಕರಾಮುವಿಯ 2021–22ನೇ ಶೈಕ್ಷಣಿಕ ಸಾಲಿನಲ್ಲಿ ಪಿಹೆಚ್.ಡಿ ಕಾರ್ಯಕ್ರಮಗಳಿಗೆ (ರೆಗ್ಯುಲರ್ ಮೋಡ್) ಪ್ರವೇಶಾತಿಗೆ ಸಂಬಂಧಪಟ್ಟಂತೆ ಜಾಹೀರಾತು ನೀಡಲು 17ನೇ ವಿಶೇಷ ಶೈಕ್ಷಣಿಕ ಮಂಡಳಿ ಸಭೆ ಹಾಗು 165ನೇ ವ್ಯವಸ್ಥಾಪನಾ ಮಂಡಳಿಯಲ್ಲಿ ಅನುಮೋದನೆ ಪಡೆದಿರುತ್ತದೆ. ಈ ಪಿಹೆಚ್.ಡಿ ಕಾರ್ಯಕ್ರಮಗಳಿಗೆ ಸಂಬಂಧಪಟ್ಟ ಪಿಹೆಚ್.ಡಿ ಆಧ್ಯಾದೇಶ 2012 (3ನೇ ತಿದ್ದುಪಡಿ 2021) ಅನುಸಾರ ಪಿಹೆಚ್.ಡಿ ಕಾರ್ಯಕ್ರಮ ನಡೆಸಲು ಪ್ರವೇಶಾತಿ 2021–22ರ (ರೆಗ್ಯುಲರ್ ಮೋಡ್) ಅಧಿಸೂಚನೆಯನ್ನು ಪತ್ರಿಕೆಗಳಲ್ಲಿ ಜಾಹೀರಾತು ನೀಡಲಾಗುವುದು. ವಿಶ್ವವಿದ್ಯಾನಿಲಯದ ವೆಬ್‌ಸೈಟ್‌ನಲ್ಲಿ ವಿವರಗಳನ್ನು ಅಪ್‌ಲೋಡ್ ಮಾಡಲಾಗುವುದು.

ಆದುದರಿಂದ, ಸದರಿ ವಿಷಯಕ್ಕೆ ಸಂಬಂಧಪಟ್ಟಂತೆ ಕರಡು ಪಿಹೆಚ್.ಡಿ ಆಧ್ಯಾದೇಶ 2012 (3ನೇ ತಿದ್ದುಪಡಿ 2021) ಅನ್ನು ವಿಶೇಷ ಶೈಕ್ಷಣಿಕ ಮಂಡಳಿ ಸಭೆ / ವ್ಯವಸ್ಥಾಪನಾ ಮಂಡಳಿಯ ಸಭೆಯಲ್ಲಿ ಚರ್ಚೆ ಹಾಗು ನಿರ್ಣಯಕ್ಕಾಗಿ ಮಂಡಿಸಿದೆ. (ಬಾವುಟ–ಆ)

<u>ತೀರ್ಮಾನ</u> :

**ಪಿಹೆಚ್.ಡಿ ಆಧ್ಯಾದೇಶ 2012 (3ನೇ ತಿದ್ದುಪಡಿ ಆಧ್ಯಾದೇಶ 2021) ಅನ್ನು ಅನುಮೋದಿಸಲಾಯಿತು.**

**ಕುಲಸಚಿವರು** **ಕುಲಪತಿಗಳು**

## ವಿಷಯ ಸಂಖ್ಯೆ: 18.06

**ವಿಷಯ: ಕರಾಮುವಿಯ 2018–19ನೇ ಶೈಕ್ಷಣಿಕ ಸಾಲಿನಲ್ಲಿ ಪಿಹೆಚ್.ಡಿ ಕಾರ್ಯಕ್ರಮಗಳಿಗೆ ಪ್ರವೇಶಾತಿ ಪಡೆದಿರುವ ವಿದ್ಯಾರ್ಥಿಗಳಿಗೆ ಕೋರ್ಸ್‌ವರ್ಕ್‌ಗಳು ಪ್ರಾರಂಭವಾಗಿದ್ದು, ಕೆಳಕಂಡ ವಿಭಾಗವಾರು ಸಲ್ಲಿಸಿರುವ ಪಿಹೆಚ್.ಡಿ ಕೋರ್ಸ್‌ವರ್ಕ್ ಸಿಲಬಸ್‌ಗಳನ್ನು ಅನುಮೋದಿಸುವ ಬಗ್ಗೆ.**

******

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ 2018–19ನೇ ಶೈಕ್ಷಣಿಕ ಸಾಲಿನಲ್ಲಿ ಪಿಹೆಚ್.ಡಿ ಪ್ರವೇಶಾತಿ ಪಡೆದು ತಾತ್ಕಾಲಿಕ ನೊಂದಣಿ ಪಡೆದಿರುವ ವಿವಿಧ ಅಧ್ಯಯನ ಮತ್ತು ಸಂಶೋಧನಾ ವಿಭಾಗವಾರು ಸಂಶೋಧನಾ ವಿದ್ಯಾರ್ಥಿಗಳಿಗೆ ಪಿಹೆಚ್.ಡಿ ಕೋರ್ಸ್‌ವರ್ಕ್‌ಗಳು 2021ರ ಮಾರ್ಚ್ ಮಾಹೆಯಲ್ಲಿ ಪ್ರಾರಂಭವಾಗಿದ್ದು, 16 ವಿಭಾಗಗಳ ಪಿಹೆಚ್.ಡಿ ಕೋರ್ಸ್‌ವರ್ಕ್ ಸಿಲಬಸ್‌ಗಳು ಅನುಮೋದನೆಗೊಂಡಿದ್ದು, ಈ ಕೆಳಕಂಡ 2 ಅಧ್ಯಯನ ಮತ್ತು ಸಂಶೋಧನಾ ವಿಭಾಗಗಳ ಪಿಹೆಚ್.ಡಿ ಕೋರ್ಸ್‌ವರ್ಕ್ ಸಿಲಬಸ್‌ಗಳನ್ನು ಅನುಮೋದನೆಗಾಗಿ ಸಲ್ಲಿಸಿರುತ್ತಾರೆ.

| ಕ್ರಮ ಸಂಖ್ಯೆ | ಕರಾಮುವಿಯ ಪಿಹೆಚ್.ಡಿ ಅಧ್ಯಯನ ಮತ್ತು ಸಂಶೋಧನಾ ವಿಭಾಗ | ಪಿಹೆಚ್.ಡಿ ಕೋರ್ಸ್‌ವರ್ಕ್ ಸಿಲಬಸ್‌ಗಳನ್ನು ಸಲ್ಲಿಸಿರುವ ಅಧ್ಯಯನ ಮತ್ತು ಸಂಶೋಧನಾ ವಿಭಾಗಗಳು | ಷರಾ |
|---|---|---|---|
| 1 | ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ಮತ್ತು ಸಂಶೋಧನಾ ವಿಭಾಗ | ಸಲ್ಲಿಸಿರುತ್ತಾರೆ. | – |
| 2 | ಮನೋವಿಜ್ಞಾನ (Psychology) ಅಧ್ಯಯನ ಮತ್ತು ಸಂಶೋಧನಾ ವಿಭಾಗ | ಸಲ್ಲಿಸಿರುತ್ತಾರೆ. | – |

ಸದರಿ ವಿಷಯವನ್ನು ಶೈಕ್ಷಣಿಕ ಮಂಡಳಿ ಸಭೆಯ ಚರ್ಚೆ ಹಾಗು ನಿರ್ಣಯಕ್ಕಾಗಿ ಮಂಡಿಸಿದೆ.

<u>ತೀರ್ಮಾನ</u> :

**ಪಿಹೆಚ್.ಡಿ ಕೋರ್ಸ್‌ವರ್ಕ್ ಸಿಲಬಸ್‌ಗಳನ್ನು ಅನುಮೋದಿಸಲಾಯಿತು.**

**ಕುಲಸಚಿವರು** **ಕುಲಪತಿಗಳು**

## ವಿಷಯ ಸಂಖ್ಯೆ: 18.07

**ವಿಷಯ:** 2021–22ರ ಜುಲೈ ಆವೃತ್ತಿಯ ಪ್ರವೇಶಾತಿಯಿಂದ ಪ್ರವೇಶಾತಿ ಶುಲ್ಕವನ್ನು ಪರಿಷ್ಕರಿಸುವ ಕುರಿತು.

*******

2021ರ ಜುಲೈ ಆವೃತ್ತಿಯಿಂದ ಎಲ್ಲಾ ಸ್ನಾತಕೋತ್ತರ ಮತ್ತು ಹೊಸದಾಗಿ ಪ್ರಾರಂಭಿಸುತ್ತಿರುವ ಬಿ.ಎಸ್ಸಿ., ಬಿ.ಬಿ.ಎ., ಬಿ.ಸಿ.ಎ., ಇತ್ಯಾದಿ ಶಿಕ್ಷಣಕ್ರಮಗಳಿಗೆ ಸಿ.ಬಿ.ಸಿ.ಎಸ್., ಪಠ್ಯಕ್ರಮವನ್ನು ಅಳವಡಿಸಿಕೊಳ್ಳುತ್ತಿರುವ ಹಿನ್ನೆಲೆಯಲ್ಲಿ ಸದರಿ ಪಠ್ಯಕ್ರಮಗಳ ಬರವಣಿಗೆಗೆ ಸಂಭಾವನೆಯನ್ನು ಪರಿಷ್ಕರಿಸಿದ್ದು, ವಿವಿ ನಿಲಯದ ಶೈಕ್ಷಣಿಕ ಅಭಿವೃದ್ಧಿ, ಮೂಲಭೂತ ಸೌಕರ್ಯ ಇತ್ಯಾದಿಗಳ ಸಂಬಂಧದಲ್ಲಿ ಆರ್ಥಿಕ ಹೊರೆಯನ್ನು ಸರಿದೂಗಿಸುವ ಹಿನ್ನೆಲೆಯಲ್ಲಿ ಪ್ರವೇಶಾತಿ ಶುಲ್ಕವನ್ನು ಪರಿಷ್ಕರಿಸುವ ಅಗತ್ಯತೆಯಿದ್ದು, ಸಾಧಕ ಬಾಧಕಗಳನ್ನು ಅವಲೋಕಿಸಿ ಕ್ರಮವಹಿಸಲು ಡೀನ್(ಶೈ) ವಿಭಾಗವು ಪ್ರವೇಶಾತಿ ವಿಭಾಗಕ್ಕೆ ಟಿಪ್ಪಣಿ ನೀಡಿರುತ್ತದೆ.

ಸದರಿ ಟಿಪ್ಪಣಿಯನ್ವಯ ಕ್ರಮವಹಿಸಲು ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ಕುಲಸಚಿವರ ಅಧ್ಯಕ್ಷತೆಯಲ್ಲಿ ಶಾಸನಬದ್ಧ ಅಧಿಕಾರಿಗಳನ್ನೊಳಗೊಂಡ ಸಮಿತಿಯನ್ನು ದಿನಾಂಕ:26.07.2021 (ಅನುಬಂಧ–1) ರಂದು ರಚಿಸಲಾಗಿತ್ತು.

ಸದರಿ ಸಮಿತಿಯು ದಿನಾಂಕ: 27.07.2021ರಂದು ಸಭೆ ಸೇರಿ, ವಿವಿ ನಿಲಯವು ನೀಡುತ್ತಿರುವ ಶೈಕ್ಷಣಿಕ ಸೇವೆಗಳು, ಪ್ರಸ್ತುತ ನಿಗದಿಪಡಿಸಿರುವ ಪ್ರವೇಶಾತಿ ಶುಲ್ಕ ಮತ್ತಿತರ ವಿವರಗಳ ಕುರಿತು ವಿಸ್ತೃತವಾಗಿ ಪರಿಶೀಲಿಸಿ ತನ್ನ ವರದಿಯನ್ನು ಸಲ್ಲಿಸಿರುತ್ತದೆ (ಅನುಬಂಧ–2).

ಸದರಿ ವರದಿಯನ್ವಯ, 2021–22ನೇ ಸಾಲಿನ ಜುಲೈ ಆವೃತ್ತಿಯ ಪ್ರವೇಶಾತಿಯಿಂದ ಪ್ರವೇಶಾತಿ ಶುಲ್ಕವನ್ನು ಪರಿಷ್ಕರಿಸುವ ಸಂಬಂಧದಲ್ಲಿ ನೇಮಕಗೊಂಡಿದ್ದ ಸಮಿತಿಯು ನೀಡಿರುವ ವರದಿಯನ್ನು ಮಾನ್ಯ ಶೈಕ್ಷಣಿಕ ಮಂಡಳಿ ಸಭೆಯ ಮುಂದೆ ವಿಷಯವನ್ನು ಚರ್ಚೆ ಹಾಗೂ ನಿರ್ಣಯಕ್ಕಾಗಿ ಮಂಡಿಸಿದೆ.

ತೀರ್ಮಾನ

**ಸದರಿ ಸಮಿತಿಯ ಶಿಫಾರಸ್ಸನ್ನು ಅನುಮೋದಿಸಲಾಯಿತು. ಕರಾಮುವಿಯ ವಿವಿಧ ಶಿಕ್ಷಣಕ್ರಮಗಳನ್ನು ಹೆಚ್ಚು ಹೆಚ್ಚು ಆಸಕ್ತರಿಗೆ ತಲುಪಿಸುವ ನಿಟ್ಟಿನಲ್ಲಿ ವಿವಿಯು ಕೈಗೊಂಡಿರುವ ಕ್ರಮಗಳನ್ನು ಶ್ಲಾಘನೆಯೊಂದಿಗೆ ಒಪ್ಪಲಾಯಿತು.**

ಅಂತಿಮವಾಗಿ 18ನೇ ವಿಶೇಷ ಶೈಕ್ಷಣಿಕ ಮಂಡಳಿ ಸಭೆಗೆ ಆಗಮಿಸಿ, ಮಂಡಿತ ವಿಷಯಗಳ ಬಗ್ಗೆ ಚರ್ಚಿಸಿ, ತಮ್ಮ ಅಮೂಲ್ಯ ಸಲಹೆ, ಸೂಚನೆಗಳನ್ನು ನೀಡಿ, ಸಭೆಯನ್ನು ಸುಸೂತ್ರವಾಗಿ ನಡೆಸಿಕೊಟ್ಟಿದ್ದಕ್ಕೆ ಎಲ್ಲಾ ಸದಸ್ಯರುಗಳಿಗೂ ಮಾನ್ಯ ಕುಲಪತಿಗಳು ಧನ್ಯವಾದಗಳನ್ನು ತಿಳಿಸುವುದರೊಂದಿಗೆ ಸಭೆಯು ಮುಕ್ತಾಯಗೊಂಡಿತು.

**ಕುಲಸಚಿವರು ಹಾಗು**
**ಸದಸ್ಯ ಕಾರ್ಯದರ್ಶಿಗಳು**

**ಕುಲಪತಿಗಳು ಹಾಗು ಅಧ್ಯಕ್ಷರು**